# ಜನಾರೋಗ್ಯ ಸನ್ನದು

(ಅಂತರಾಷ್ಟ್ರೀಯ ಆವೃತ್ತಿ)



ಜನಾರೋಗ್ಯ ಆಂದೋಲನ ಪುಸ್ತಕ ಮಾಲಿಕೆ

# ಜನಾರೋಗ್ಯ ಸನ್ನದು

(ಅಂತರಾಷ್ಟ್ರೀಯ ಆವೃತ್ತಿ)



ಜನಾರೋಗ್ಯ ಆಂದೋಲನ ಪುಸ್ತಕ ಮಾಲಿಕೆ

ತಯಾರಿ ಹಾಗೂ ಪ್ರಕಟಣೆ
ಜನಾರೋಗ್ಯ ಆಂದೋಲನ – ಕರ್ನಾಟಕ
ರಾಜ್ಯ ಸಂಯೋಜನಾ ಸಮಿತಿ
ಬೆಂಗಳೂರು

**Janaarogya Sannadu (International) -** translated by A. Prahlad,
Community Health Cell, Bangalore.

First edition : 2002

Pages :

Published for : **Janaarogya Andolana - Karnataka**

by :

**Community Health Cell**
No.367, 'Srinivasa Nilaya'
Jakkasandra I Main,
I Block, Koramangala,
Bangalore - 560 034.
Phone : 5531518
Telefax : 5525372
Email : sochara@vsnl.com

**DTP & Printers :**

Bharani Printers,
Bangalore - 560 062.
Ph : 6322506

# ಮುನ್ನುಡಿ

"ಜನಾರೋಗ್ಯ ಆಂದೋಲನ" ಕಾರ್ಯಕ್ರಮ ಹಲವು ಜನಪರ ಸಂಸ್ಥೆಗಳು ಒಟ್ಟುಗೂಡಿ ಸಂಯೋಜನೆ ಮಾಡುತ್ತಿರುವ ಕಾರ್ಯಕ್ರಮವಾಗಿದೆ . "ಎಲ್ಲರಿಗೂ ಆರೋಗ್ಯ 2000ದ ವೇಳೆಗೆ" ಎಂಬ ಘೋಷಣೆ ವಿಫಲವಾಗಿರುವ ಹಿನ್ನೆಲೆಯಲ್ಲಿ, " ಜನಾರೋಗ್ಯ ಆಂದೋಲನ" ವು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಎಲ್ಲರಿಗೂ ಆರೋಗ್ಯ ಎಂದರೆ ಎಲ್ಲರಿಗೂ ಆಹಾರ, ವಸತಿ, ಬಟ್ಟೆ, ಶಿಕ್ಷಣದಂತಹ ಮೂಲ ಸೌಲಭ್ಯಗಳು. ಆದರೆ ಜನರ ಅಗತ್ಯಗಳನ್ನು ಅವರೇ ಗುರುತಿಸಿ, ತಾವೇ ಅಂತಹ ಅಗತ್ಯಗಳನ್ನು ದೊರಕಿಸಿಕೊಳ್ಳಲು ಕಾರ್ಯೋನ್ಮುಖರಾಗಬೇಕಿದೆ. ಎಂದರೆ, ಇದರರ್ಥ ಸರ್ಕಾರ ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳಬಹುದೆಂದಲ್ಲ. ಜನರ ಸಹಭಾಗಿತ್ವದೊಂದಿಗೆ ಸರ್ಕಾರ "ಎಲ್ಲರಿಗೂ ಆರೋಗ್ಯ" ದೆಡೆಗೆ ಹೆಜ್ಜೆ ಇರಿಸಬೇಕಿದೆ. ಜನರ ಅಗತ್ಯಗಳಿಗೆ ಸ್ಪಂದಿಸದಿದ್ದಲ್ಲಿ ಜನಾರೋಗ್ಯ ಸುಧಾರಿಸುವುದಿಲ್ಲ ಎಂಬುದು ಈಗಾಗಲೇ ಸರ್ವವಿದಿತವಾಗಿದೆ.

ಈ "ಜನಾರೋಗ್ಯ ಸನ್ನದು" ಜನರ ಆಶೋತ್ತರಗಳಿಗೆ, ಅಗತ್ಯಗಳಿಗೆ ಸ್ಪಂದಿಸುವಂತಹದ್ದಾಗಿದೆ ಎಂಬುದು ನಮ್ಮ ನಂಬಿಕೆ. ಇದನ್ನು ಜನರಲ್ಲಿಗೆ ಮತ್ತೊಮ್ಮೆ ಒಯ್ದು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ.

ಈ ನಮ್ಮ ಪ್ರಯತ್ನದಲ್ಲಿ ನಮ್ಮೊಂದಿಗೆ ನೀವೆಲ್ಲರೂ ಇರುತ್ತೀರಿ ಎಂದು ನಂಬಿ, ಈ ಸನ್ನದನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ. ಇದನ್ನು ಉಳಿಸಿ, ಬಳಸಿ, ಬೆಳೆಸುವ ಪ್ರಯತ್ನದಲ್ಲಿ ಎಲ್ಲರೂ ಒಗ್ಗಟ್ಟಾಗಿ ದುಡಿಯೋಣ.

ರಾಜ್ಯ ಸಂಯೋಜನಾ ಸಮಿತಿ,

ಏಪ್ರಿಲ್ 2002

ಜನಾರೋಗ್ಯ ಆಂದೋಲನ - ಕರ್ನಾಟಕ

# ಜನಾರೋಗ್ಯ ಸನ್ನದು

## (ಅಂತರಾಷ್ಟ್ರೀಯ)

### *ಪರಿಚಯ*

1978ರಲ್ಲಿ ಆಲ್ಮಾ ಆಟಾದಲ್ಲಿ 134 ಸದಸ್ಯ ದೇಶಗಳ ಸಚಿವರುಗಳು, ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಯುನಿಸೆಫ್‌ನ ಸಹಯೋಗದೊಂದಿಗೆ **"ಎಲ್ಲರಿಗೂ ಶತಮಾನ 2000 ವೇಳೆಗೆ ಆರೋಗ್ಯ"**ಎಂದು ಘೋಷಿಸಿ, ಪ್ರಾಥಮಿಕ ಆರೋಗ್ಯ ಪಾಲನೆಯೇ ಅದನ್ನು ಸಾಧಿಸಲು ಮುಖ್ಯ ಸಾಧನ ಎಂದು ನಿರ್ಧರಿಸಿದವು.

ದುರಾದೃಷ್ಟವಶಾತ್, ಈ ಕನಸು ಇಂದಿಗೂ ಸಾಕಾರಗೊಂಡಿಲ್ಲ. ತೃತೀಯ ಜಗತ್ತಿನಲ್ಲಿ ಜನಾರೋಗ್ಯ ಮಟ್ಟ ಇನ್ನೂ ಸುಧಾರಿಸಿಲ್ಲ. ಎಷ್ಟೋ ವಿಷಯಗಳಲ್ಲಿ ಇದು ಮತ್ತಷ್ಟು ಕುಸಿದಿದೆ. ಪ್ರಚಲಿತ ಸಂದರ್ಭದಲ್ಲಿ ವಿಶ್ವವ್ಯಾಪಕ ಆರೋಗ್ಯ ಬಿಕ್ಕಟ್ಟು ತೋರಿಬಂದಿದೆ. ಇದಲ್ಲದೆ ದೇಶಗಳ ಒಳಗೆ ಹಾಗೂ ದೇಶ, ದೇಶಗಳ ನಡುವೆ ಅಸಮಾನತೆ ಹೆಚ್ಚುತ್ತಿದೆ. ಜೊತೆಗೆ ನಾವಿಂದು ಜಾಗತಿಕ ಆರೋಗ್ಯ ಬಿಕ್ಕಟ್ಟನ್ನು ಎದುರಿಸುತ್ತಿದ್ದೇವೆ. ಆರೋಗ್ಯಕ್ಕೆ ಅಪಾಯ ಸೂಚಿಸುವ ಅಂಶಗಳು ಸತತವಾಗಿ ಬೆಳೆಯುತ್ತಿದೆ. ಅದರಲ್ಲಿಯೂ ಜಾಗತೀಕರಣ ಎಂಬ ಪೆಡಂಭೂತವು ಎಲ್ಲರಿಗೂ, ಅದರಲ್ಲಿಯೂ ಬಡವರಿಗೆ ಸಮಾನವಾಗಿ ಸಂಪನ್ಮೂಲ ದೊರೆಯುವಂತೆ ಮಾಡುವ ಪ್ರಯತ್ನಕ್ಕೆ ಅಡ್ಡಗೋಡೆಯಾಗಿ ನಿಂತಿದೆ.

ಆರೋಗ್ಯದ ವಿಭಾಗದೊಳಗೂ ಸಹ ಆಲ್ಮಾ ಆಟಾದ ಕಲ್ಪನೆಯ ಪ್ರಾಥಮಿಕ ಆರೋಗ್ಯ ಪಾಲನೆಯ ಅನುಷ್ಠಾನ ಆಗದಿರುವುದೂ ಸಹ ವಿಶ್ವ ಆರೋಗ್ಯ ಪರಿಸ್ಥಿತಿ ಹದಗೆಡಲು ಮುಖ್ಯ ಕಾರಣವಾಗಿದೆ. ಸರ್ಕಾರಿ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳೂ ಸಹ ಇಂತಹ ಪರಿಸ್ಥಿತಿಗೆ ಕಾರಣವಾಗಿದೆ.

ಈಗ, ಆರೋಗ್ಯಕ್ಕೆ ಅಂತರಾಷ್ಟ್ರೀಯ ಕಾರ್ಯಕ್ರಮ ಪಟ್ಟಿಯಲ್ಲಿ ಅಗ್ರಸ್ಥಾನ ದೊರಕಿಸಲು ಒಟ್ಟುಗೂಡಿದ ಪ್ರಯತ್ನ ಆಗಬೇಕಿದೆ. ಜನಾಧಾರಿತ ಪ್ರಯತ್ನಗಳಿಗೆ ಸೂಕ್ತ ಬೆಂಬಲ ದೊರಕಿಸಿಕೊಡುವ ಮೂಲಕ, ಸರ್ಕಾರ, ಖಾಸಗಿ ವಲಯ ಹಾಗೂ ನಿರ್ಧಾರ ಮಾಡುವವರ ಮೇಲೆ ಒತ್ತಡ ತಂದು ಆಲ್ಮಾ ಆಟಾದ ಕಲ್ಪನೆಯನ್ನು ಸಾಕಾರಗೊಳಿಸಬೇಕಿದೆ.

ಹಲವಾರು ಅಂತರಾಷ್ಟ್ರೀಯ ಸಂಸ್ಥೆಗಳು, ಪೌರ ಸಮಾಜ ಆಂದೋಲನಗಳು, ಸರ್ಕಾರೇತರ ಸಂಸ್ಥೆಗಳು, ಹಾಗೂ ಮಹಿಳಾ ಗುಂಪುಗಳು ಈ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಒಟ್ಟಾಗಿ ದುಡಿಯಲು ನಿರ್ಧರಿಸಿದವು. ಈ ಗುಂಪು ಪ್ರಾಥಮಿಕ ಆರೋಗ್ಯ ಪಾಲನೆ ಹಾಗೂ ಜನರ ಅಭಿಪ್ರಾಯಕ್ಕೆ ಹೆಚ್ಚು ಒತ್ತು ಕೊಟ್ಟು ಜಾಗತಿಕ ಜನಾರೋಗ್ಯ ಸಭೆಯನ್ನು 2000ದ ಡಿಸೆಂಬರ್ 4-8ರವರೆಗೆ, ಬಾಂಗ್ಲಾದೇಶದ ಗೊಣೊ ಶಾಸ್ಥ್ಯ ಕೇಂದ್ರದಲ್ಲಿ ನಡೆಸಿದವು.

ಈ ಸಭೆಯು ಅಂತರಾಷ್ಟ್ರೀಯ ಮಟ್ಟದಲ್ಲಿ 18 ತಿಂಗಳ ಕಾಲ ನಡೆದ ತಯಾರಿ ಕಾರ್ಯಕ್ರಮದ ಅಂತಿಮ ಹಂತ. ಈ ಹಂತದಲ್ಲಿ 92 ದೇಶಗಳಿಂದ ಆಗಮಿಸಿದ್ದ 1453 ಭಾಗಾರ್ಥಿಗಳಲ್ಲದೆ , ಸಮಾಜದ ಎಲ್ಲ ವರ್ಗಗಳ ಜನರಿಂದ ವಿವಿಧ ರೀತಿಯ, ವಿವಿಧ ಹಂತದ ಪ್ರತಿಕ್ರಿಯೆ, ಪ್ರೋತ್ಸಾಹ ಕಂಡಿದೆ.

ಹಲವು ಸಮಸ್ಯೆಗಳು, ಕಷ್ಟ ಕೋಟಲೆಗಳು, ಅನುಭವಗಳನ್ನು ಹಂಚಿಕೊಂಡ ನಂತರ, ಈ ಜನಾರೋಗ್ಯ ಸನ್ನದು ತಯಾರಾಗಿದೆ.

# ಜನಾರೋಗ್ಯ ಸನ್ನದು

## ಪ್ರಸ್ತಾವನೆ

ಆರೋಗ್ಯವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶ ಅಲ್ಲದೆ, ಎಲ್ಲಕ್ಕೂ ಮಿಗಿಲಾಗಿ, ಮೂಲಭೂತ ಮಾನವ ಹಕ್ಕಿನ ಅಂಶವಾಗಿದೆ. ಇಂದು ಬಡವರು ಹಾಗೂ ದೀನರ ಅನಾರೋಗ್ಯ ಹಾಗೂ ಸಾವಿಗೆ, ಅಸಮಾನತೆ, ದಾರಿದ್ರ್ಯ, ಶೋಷಣೆ, ಹಿಂಸೆ ಹಾಗೂ ಅನ್ಯಾಯಗಳು ಮೂಲ ಕಾರಣವಾಗಿವೆ. "ಎಲ್ಲರಿಗೂ ಆರೋಗ್ಯ" ಎಂದರೆ ಬಲಿಷ್ಠರ ಆಸಕ್ತಿಗಳನ್ನು ಪ್ರತಿಭಟಿಸುವುದು, ಜಾಗತೀಕರಣವನ್ನು ವಿರೋಧಿಸುವುದು, ಅಲ್ಲದೆ ಈಗಿರುವ ಆರ್ಥಿಕ / ರಾಜಕೀಯ ಮೊದಲಾದ ಪ್ರಾಶಸ್ತ್ಯಗಳಲ್ಲಿ ಬದಲಾವಣೆ ಉಂಟುಮಾಡುವುದು.

ಈ ಜನಾರೋಗ್ಯ ಸನ್ನದು, ಹಿಂದೆ ಯಾರ ಧ್ವನಿಗಳಿಗೆ ಬಲ ಇರಲಿಲ್ಲವೋ ಅಂತಹವರ ಆಶೋತ್ತರಗಳನ್ನು ವ್ಯಕ್ತಪಡಿಸುವ ಪ್ರಯತ್ನ. ಜನರು ತಮ್ಮ ಪರಿಹಾರಗಳನ್ನು ತಾವೇ ಕಂಡುಕೊಳ್ಳುವುದಲ್ಲದೇ, ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಪ್ರಶ್ನೆ ಮಾಡುವಂತಾಗಬೇಕೆಂಬುದೇ ಈ ಜನಾರೋಗ್ಯ ಸನ್ನದಿನ ಪ್ರಯತ್ನ.

## ದೃಷ್ಟಿಕೋನ

ಸಮಾನತೆ, ಪರಿಸರ-ಪೂರಕ ಅಭಿವೃದ್ಧಿ ಹಾಗೂ ಶಾಂತಿ - ಆರೋಗ್ಯಕರ ಜೀವನದ ದ್ಯೋತಕ ಎಂಬುದು ಈ ಸನ್ನದಿನ ದೃಷ್ಟಿ. ಎಲ್ಲರ ಪ್ರತಿಭೆಗಳಿಗೂ ಸಮಾನ ಅವಕಾಶ ಇರುವ ಜಗತ್ತು ಜನರ ಆಶೋತ್ತರಗಳಿಗೆ ಸ್ಪಂದಿಸುವ ಆಡಳಿತ ಇಂದು ಹಿಂದೆಂದಿಗಿಂತಲೂ ಹೆಚ್ಚು ಅವಶ್ಯಕವಾಗಿದೆ.

ಈ ದೃಷ್ಟಿಯನ್ನು ಸಾಕಾರಗೊಳಿಸುವಷ್ಟು ಸಂಪನ್ಮೂಲ ಈ ಜಗತ್ತಿನಲ್ಲಿದೆ.

## ಆರೋಗ್ಯ ಬಿಕ್ಕಟ್ಟು

"ಅನಾರೋಗ್ಯ ಹಾಗೂ ದಿನನಿತ್ಯದ ಸಾವು ನಮಗೆ ಕೋಪವುಂಟು ಮಾಡುತ್ತದೆ. ಜನ ಸಾಯುತ್ತಿದ್ದಾರೆಂದಾಗಲೀ, ಕಾಯಿಲೆ ಅನುಭವಿಸುತ್ತಿದ್ದಾರೆಂದಾಗಲೀ ಕೋಪವಲ್ಲ, ಈ ಸಮಸ್ಯೆಗೆ ಮೂಲ ಕಾರಣ, ನಮ್ಮ ಮೇಲೆ ಹೇರಿರುವ ಆರ್ಥಿಕ ಹಾಗೂ ರಾಜಕೀಯ ನೀತಿ ಎಂಬ ಕಾರಣಕ್ಕಾಗಿಯೇ ನಮ್ಮ ಒಳಗುದಿ ".

(ಮಧ್ಯ ಅಮೇರಿಕಾದಿಂದ ಒಂದು ಧ್ವನಿ)

ಇತ್ತೀಚಿನ ದಶಕಗಳಲ್ಲಿ, ಜಗತ್ತಿನಾದ್ಯಂತ ಉಂಟಾಗಿರುವ ಆರ್ಥಿಕ ನೀತಿಗಳ ಮಾರ್ಪಾಟುಗಳು, ಜನರ ಆರೋಗ್ಯವನ್ನು, / ಆರೋಗ್ಯಕ್ಕಿರುವ ಅವಕಾಶಗಳನ್ನು ಕಡಿತಗೊಳಿಸಿವೆ ಎಂಬುದು ಕಟು ಸತ್ಯ. ಜಗತ್ತಿನ ಸಂಪತ್ತು ಹೆಚ್ಚುತ್ತಿದ್ದರೂ, ದಾರಿದ್ರ್ಯ ಹಾಗೂ ಹಸಿವು ಹೆಚ್ಚುತ್ತಿದೆ. ಶ್ರೀಮಂತ ಹಾಗೂ ಬಡರಾಷ್ಟ್ರಗಳ ನಡುವೆ ಅಂತರ ಹೆಚ್ಚುತ್ತಿದೆ, ಅಲ್ಲದೆ, ದೇಶಗಳ ಒಳಗೆ ಜಾತಿ, ವರ್ಗಗಳ ನಡುವಿನ ಅಂತರವೂ ಹೆಚ್ಚಾಗುತ್ತಲೇ ಇದೆ.

ಜಗತ್ತಿನ ಹೆಚ್ಚಿನ ಜನಸಂಖ್ಯೆ ಇಂದಿಗೂ ಆಹಾರ, ಶಿಕ್ಷಣ, ಸ್ವಚ್ಛ ಕುಡಿಯುವ ನೀರು, ನೈರ್ಮಲ್ಯ, ವಸತಿ, ಭೂಮಿ, ಉದ್ಯೋಗ, ಆರೋಗ್ಯ ಮುಂತಾದವುಗಳಿಂದ ವಂಚಿತವಾಗಿದೆ. ತಾರತಮ್ಯ ಎಲ್ಲೆಡೆ ತಾಂಡವವಾಡುತ್ತಿದೆ.

ಭೂಮಿಯ ನೈಸರ್ಗಿಕ ಸಂಪನ್ಮೂಲಗಳು, ಗಾಬರಿಗೊಳಿಸುವಷ್ಟು ವೇಗದಲ್ಲಿ ಕಣ್ಮರೆಯಾಗುತ್ತಿವೆ. ಇದರಿಂದಾಗಿ, ಎಲ್ಲರಿಗೂ, ಮುಖ್ಯವಾಗಿ, ಬಡವರಿಗೆ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ವಿಪ್ಲವಕಾರಿ ಶಸ್ತ್ರಾಸ್ತ್ರಗಳು ಮನುಕುಲದ ಇರುವಿಕೆಗೆ ಮಾರಕವಾಗಿ ಪರಿಣಮಿಸುತ್ತದೆ.

ಹೊಸ ಹೊಸ ಬಿಕ್ಕಟ್ಟುಗಳು ಹೆಚ್ಚಾಗುತ್ತಿರುವ ಈ ಸಮಯದಲ್ಲಿ ಎಲ್ಲೋ ಕೆಲವು ಧನದಾಹಿ ಶ್ರೀಮಂತರ ಕೈಯಲ್ಲಿ ಹೆಚ್ಚು ಸಂಪನ್ಮೂಲ ಸೇರಿಕೊಂಡಿದೆ. ಕೆಲವು ಬಲಿಷ್ಠ ರಾಷ್ಟ್ರಗಳು / ಅಂತರಾಷ್ಟ್ರೀಯ ಸಂಸ್ಥೆಗಳು, ತಮಗೆ ಬೇಕಾದಂತೆ ಆರ್ಥಿಕ ಹಾಗೂ ರಾಜಕೀಯ ನೀತಿ ರೂಪಿಸಿ, ಬಡರಾಷ್ಟ್ರಗಳ ಮೇಲೆ ಹೇರುತ್ತಿವೆ. ಇವುಗಳೊಂದಿಗೆ, ಬೃಹತ್ ರಾಷ್ಟ್ರೀಯ ಸಂಸ್ಥೆಗಳು ಬಡರಾಷ್ಟ್ರಗಳ ಬಡಜನತೆಯ ಆರೋಗ್ಯಕ್ಕೆ ಅಡ್ಡಗಾಲಾಗಿ ನಿಂತಿವೆ.

ಸಾರ್ವಜನಿಕ ಸೇವೆಗಳು, ಜನರ ಆಶೋತ್ತರಗಳನ್ನು ಪೂರೈಸಿಲ್ಲ. ಇದಕ್ಕೆ ಮುಖ್ಯ ಕಾರಣ ಎಂದರೆ, ಸರ್ಕಾರಗಳು ಸಾಮಾಜಿಕ ಸೇವೆಗಳಿಗೆ ಹಣ ಕಡಿತಗೊಳಿಸಿರುವುದು. ಆರೋಗ್ಯ ಸೇವೆಗಳು ಜನರಿಂದ ದೂರವಾಗಿವೆ, ಅಲ್ಲದೇ ಸೇವೆಗಳ ಹಂಚಿಕೆ ಸಮಾನವಾಗಿಲ್ಲ .

ಖಾಸಗೀಕರಣದಂತಹ ನೀತಿಗಳು, ಬಡಜನರು ಆರೋಗ್ಯ ಸೇವೆಗಳಿಗೆ ಹೋಗುವುದನ್ನು ಮತ್ತಷ್ಟು ಕಡಿತಗೊಳಿಸಿವೆ. ಪ್ರತಿಬಂಧಿಸಬಹುದಾದ ಕಾಯಿಲೆಗಳು' ಕಡಿಮೆ ಆಗದಿರುವುದು, ಕ್ಷಯ ಹಾಗೂ ಮಲೇರಿಯಾ ಕಾಯಿಲೆಗಳ ಪುನರುತ್ಥಾನ, ಹಾಗೂ ಹೆಚ್ಚು ಭೀಕರವಾಗಿರುವ ಏಡ್ಸ್‌ನಂತಹ ಮಾರಕ ಸಮಸ್ಯೆಗಳು ಜಗತ್ತು ಅಸಮಾನತೆಯತ್ತ ವಾಲಿರುವ ಸೂಚಕವಾಗಿದೆ.

## ಜನಾರೋಗ್ಯ ಸನ್ನದಿನ ತತ್ವಗಳು

ಅತ್ಯುತ್ತಮ ಮಟ್ಟದ ಆರೋಗ್ಯ ಹಾಗೂ ಬದುಕು ಗಳಿಸುವ ಸಾಧನೆ ಪ್ರತಿಯೊಬ್ಬರಿಗೂ ದೊರೆಯಬೇಕು. ಇದನ್ನು ದೊರಕಿಸುವ ಪ್ರಯತ್ನದಲ್ಲಿ ಜಾತಿ, ವರ್ಣ, ವರ್ಗ, ಲಿಂಗ ಮುಂತಾದವುಗಳಲ್ಲಿ ಭೇದ ಇರಬಾರದು.

1978ರ ಆಲ್ಮಾ ಆಟಾ ಘೋಷಣೆಯಲ್ಲಿರುವಂತೆ ಪರಿಪೂರ್ಣ ಜಾಗತಿಕ ಆರೋಗ್ಯ ಸೇವೆಗಳ ತತ್ವ, ಆರೋಗ್ಯ ನೀತಿಗಳನ್ನು ಜಾರಿ ಮಾಡುವಲ್ಲಿ ಮೂಲತತ್ವವಾಗಬೇಕು. ಈಗ ಹಿಂದೆಂದಿಗಿಂತಲೂ ಸಮಾನವಾದ, ಸಹಭಾಗಿತ್ವದ, ಹಾಗೂ ಅಂತರ್ ವಿಭಾಗೀಯ ಸಹಕಾರದ ವಿಧಾನ ಅಗತ್ಯವಾಗಿದೆ.

* ಜನರ ಅಗತ್ಯಗಳಿಗೆ ತಕ್ಕಂತೆ ಸೇವೆಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ. ಕಾರ್ಯಕ್ರಮವು ಜನರು ಎಷ್ಟು ಖರ್ಚು ಮಾಡಲು ಸಿದ್ಧರಿದ್ದಾರೆ ಎಂಬುದರ ಮೇಲೆ ಆಧಾರವಾಗಿರಬಾರದು.

* ಆರೋಗ್ಯ, ಸಾಮಾಜಿಕ ನೀತಿ, ರೂಪಿಸುವಲ್ಲಿ ಜನಪರ ಸಂಘಟನೆಗಳ ಅಭಿಪ್ರಾಯ ಅಗತ್ಯವಾಗಿರುತ್ತದೆ.

* ಆರೋಗ್ಯವು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ನೀತಿಗಳಿಂದ ರೂಪಿತವಾಗಿರುವುದರಿಂದ, ಈ ಅಂಶವು ಈ ಎಲ್ಲಾ ನೀತಿಗಳಲ್ಲಿ ಹೆಚ್ಚಿನ ಆದ್ಯತೆ ಪಡೆಯಬೇಕು.

## ಕಾರ್ಯಕ್ಕೆ ಕರೆ

ಈ ಆರೋಗ್ಯ ಬಿಕ್ಕಟ್ಟನ್ನು ಪ್ರತಿಭಟಿಸಲು ನಾವು ಎಲ್ಲ ಹಂತದಲ್ಲೂ ಕೆಲಸ ಮಾಡಬೇಕಾಗಿದೆ. ವ್ಯಕ್ತಿ, ಸಮುದಾಯ, ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಯತ್ನಗಳು ಆಗಬೇಕಾಗಿದೆ. ಈ ಕೆಳಗೆ ಸೂಚಿಸಿರುವ ಬೇಡಿಕೆ ಕಾರ್ಯಕ್ಕೆ ಬೇಕಾದ ಅಗತ್ಯಗಳನ್ನು ಒದಗಿಸುತ್ತದೆ.

# ಮಾನವ ಹಕ್ಕಾಗಿ ಆರೋಗ್ಯ

ಆರೋಗ್ಯ, ಸಮಾಜದಲ್ಲಿ ಸಮಾನತೆ ಹಾಗೂ ನ್ಯಾಯಕ್ಕೆ ಎಷ್ಟರ ಮಟ್ಟಿಗೆ ಗೌರವ ಇದೆ ಎಂಬುದನ್ನು ಸೂಚಿಸುತ್ತದೆ. ಆರ್ಥಿಕ ಹಾಗೂ ರಾಜಕೀಯ ಕಾಳಜಿಗಳಿಗಿಂತ ಆರೋಗ್ಯ ಒಂದು ಮಾನವ ಹಕ್ಕು ಎಂಬುದು ಮುಖ್ಯ.

## ಈ ಜನಾರೋಗ್ಯ ಸನ್ನದು ಜನರನ್ನು ಈ ಎಲ್ಲಾ ಕಾರ್ಯಗಳಿಗೆ ಕೂಗಿ ಕರೆಯುತ್ತದೆ :-

* ಆರೋಗ್ಯಕ್ಕಾಗಿ ಇರುವ ಹಕ್ಕನ್ನು ಗಳಿಸುವ ಎಲ್ಲ ಪ್ರಯತ್ನಗಳಿಗೂ ಪ್ರೋತ್ಸಾಹ.

* ಆರೋಗ್ಯದ ಹಕ್ಕನ್ನು ಪುನರ್ರಚಿಸುವ, ಅನುಷ್ಠಾನಗೊಳಿಸುವ ಹಾಗೂ ಆರೋಗ್ಯ ಹಕ್ಕು ಎಂಬ ನೀತಿಗಳನ್ನು ರೂಪಿಸುವಂತೆ ಸರಕಾರಗಳಿಗೆ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳಿಗೆ ಕೋರಿಕೆ.

* ಎಲ್ಲಾ ಕಾಯಿದೆಗಳಲ್ಲಿ / ಸಂವಿಧಾನದಲ್ಲಿ ಆರೋಗ್ಯ ಹಕ್ಕು ಎಂಬ ವಿಷಯವನ್ನು ಅಳವಡಿಸುವಂತೆ ಒತ್ತಾಯಿಸಲು ಬೃಹತ್ ಮಟ್ಟದ ಜನ ಸಂಘಟನೆ ಕಟ್ಟಬೇಕು.

* ಲಾಭಕ್ಕಾಗಿ ಜನಾರೋಗ್ಯದಿಂದ ಲಾಭ ಪಡೆಯುವುದರ ವಿರುದ್ಧ ಹೋರಾಟ.

# ಆರೋಗ್ಯದ ವಿಶಾಲ ನಿರ್ಧಾರಕಗಳನ್ನು ನಿಭಾಯಿಸುವುದು

## *ಆರ್ಥಿಕ ಸವಾಲುಗಳು*

ಆರ್ಥಿಕ ವ್ಯವಸ್ಥೆಯು ಆರೋಗ್ಯದ ಮೇಲೆ ಅಪಾರ ಪರಿಣಾಮ ಬೀರುತ್ತದೆ. ಯಾವ ಅರ್ಥ ನೀತಿಯಲ್ಲಿ ಸಮಾನತೆ, ಆರೋಗ್ಯ ಹಾಗೂ ಸಾಮಾಜಿಕ ಸುಸ್ಥಿತಿಗೆ ಅಗ್ರಸ್ಥಾನ ದೊರೆಯುವುದೋ, ಅಂತಹ ಅರ್ಥ ನೀತಿಯಿಂದ ದೇಶದಲ್ಲಿ ಆರೋಗ್ಯ ಹಾಗೂ ಅರ್ಥ ವ್ಯವಸ್ಥೆ ಎರಡೂ ಸುಧಾರಿಸುತ್ತದೆ.

ಅಂತರಾಷ್ಟ್ರೀಯ ಸಂಸ್ಥೆಗಳ ಹಾಗೂ ಬಂಡವಾಳಶಾಹಿ ರಾಷ್ಟ್ರಗಳ ಅಗತ್ಯಕ್ಕೆ ತಯಾರಾಗುವ ಆರ್ಥಿಕ, ರಾಜಕೀಯ ಹಾಗೂ ವ್ಯವಸಾಯದ ನೀತಿ / ಜನರು, ತಮ್ಮ ಬದುಕಿನಿಂದ, ಬದುಕಿನ ಆಧಾರದಿಂದ ದೂರವಾಗುವಂತೆ ಮಾಡುತ್ತದೆ. ಆರ್ಥಿಕ ಜಾಗತೀಕರಣ ಹಾಗೂ ಉದಾರೀಕರಣದಂತಹ ನೀತಿಗಳು, ರಾಷ್ಟ್ರಗಳ ಒಳಗೆ ಹಾಗೂ ಹೊರಗೆ ಅಸಮಾನತೆಯನ್ನು ಹೆಚ್ಚಿಸಿವೆ.

ಹಲವು ಬಲಿಷ್ಠ ರಾಷ್ಟ್ರಗಳು ತಮ್ಮ ಸಂಪನ್ಮೂಲಗಳನ್ನು ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸುತ್ತ ಜನರ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರಿವೆ.

## ಈ ಜನಾರೋಗ್ಯ ಸನ್ನದು ಜನರನ್ನು ಈ ಎಲ್ಲಾ ಕಾರ್ಯಗಳಿಗೆ ಕೂಗಿ ಕರೆಯುತ್ತದೆ :-

* ಬಲಿಷ್ಠ ರಾಷ್ಟ್ರಗಳ ಪರವಾಗಿ ಬಡರಾಷ್ಟ್ರ ವಿರೋಧಿ ತತ್ವಗಳನ್ನು ಅನುಸರಿಸುತ್ತಿರುವ ವಿಶ್ವವ್ಯಾಪಾರ ಸಂಸ್ಥೆ ಹಾಗೂ ಜಾಗತಿಕ ವ್ಯಾಪಾರ ವ್ಯವಸ್ಥೆಯ ನೀತಿಯಲ್ಲಿ ಬದಲಾವಣೆಯಾಗುವಂತೆ ಒತ್ತಾಯಿಸುವುದು. ಜನಾರೋಗ್ಯದ ಹಿತದೃಷ್ಟಿಯಿಂದ ಟ್ರಿಪ್ಸ್‌ನಂತಹ ನೀತಿಗಳಲ್ಲೂ ಬದಲಾವಣೆ ತರುವುದು.

* ತೃತೀಯ ಜಗತ್ತಿನ ಸಾಲದ ಹೊರೆಯ ರದ್ದತಿ.

* ಅಂತರಾಷ್ಟ್ರೀಯ ಹಣಕಾಸು ನಿಧಿ ಹಾಗೂ ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳು ಬಡಜನರ ಹಿತಾಸಕ್ತಿಯನ್ನು ಪ್ರತಿಬಿಂಬಿಸುವಂತೆ ಒತ್ತಾಯ.

* ಬಹುರಾಷ್ಟ್ರೀಯ ಕಂಪನಿಗಳು ಬಡ ರಾಷ್ಟ್ರಗಳಲ್ಲಿ ಯಾವುದೇ ದುಷ್ಪರಿಣಾಮ ಆಗದ ವ್ಯಾಪಾರ ಮಾಡಬೇಕೆಂಬ ಒತ್ತಾಯ.

* ಜನಪರವಾದ ವ್ಯವಸಾಯ ನೀತಿ ಹಾಗೂ ಜನರ ಅವಶ್ಯಕತೆಗಳ ಉತ್ಪಾದನೆಗೆ ಬೇಕಾದ ವ್ಯವಸ್ಥೆ ಮಾಡುವ ಮೂಲಕ ಜನರ ಆಹಾರ ಸುರಕ್ಷತೆ ಕಾಪಾಡುವುದು.

* ಸಾರ್ವಜನಿಕ ಆರೋಗ್ಯದ ಹಿತಾಸಕ್ತಿಯನ್ನು ಕಾಪಾಡುವಂತೆ ಆಯಾ ಸರ್ಕಾರಗಳನ್ನು ಒತ್ತಾಯಿಸುವುದು.

* ಅಂತರಾಷ್ಟ್ರೀಯ ಹಣಕಾಸು ಸಂಚಾರದ ಬಗ್ಗೆ ಗಮನ ಹರಿಸಿ, ಅದನ್ನು ನಿಯಂತ್ರಿಸುವುದು.

* ಎಲ್ಲಾ ಆರ್ಥಿಕ ನೀತಿಗಳೂ, ಆರೋಗ್ಯ, ಅಸಮಾನತೆ, ಲಿಂಗತ್ವ ಹಾಗೂ ಪರಿಸರಕ್ಕೆ ಪೂರಕವಾಗಿರುವಂತೆ ನೋಡಿಕೊಳ್ಳಬೇಕು.

* ಬೆಳವಣಿಗೆಯನ್ನೇ ಗುರಿಯಾಗಿಟ್ಟುಕೊಂಡ ಆರ್ಥಿಕ ನೀತಿಯ ಬದಲಾಗಿ, ಮಾನವೀಯ ಅಂಶಗಳನ್ನು ಒಳಗೊಂಡ ನೀತಿಯ ಆಗತ್ಯತೆ ಇದೆ. ಆರ್ಥಿಕ ಸಿದ್ಧಾಂತಗಳಲ್ಲಿ, ಪರಿಸರದ ಮೇಲಿನ ಪರಿಣಾಮ, ಸಮಾನತೆ ಹಾಗೂ

ಆರೋಗ್ಯದ ಮೇಲಿನ ಪರಿಣಾಮದ ಮೇಲೆಯೂ ಗಮನವಿರಬೇಕು. ಅಲ್ಲದೆ,ಸಂಬಳ ರಹಿತ (ಮನೆಯಲ್ಲಿ ಮಹಿಳೆಯರು ಕೆಲಸ ಮಾಡುವುದು) ದುಡಿಮೆಯನ್ನೂ ಗುರುತಿಸಬೇಕು.

## ಸಾಮಾಜಿಕ ಹಾಗೂ ರಾಜಕೀಯ ಸವಾಲುಗಳು

ಪರಿಪೂರ್ಣ ಸಾಮಾಜಿಕ ನೀತಿಗಳು ಜನರ ಬದುಕಿನ ಮೇಲೆ ಹಾಗೂ ಬದುಕಿನ ಆಧಾರದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತವೆ. ಆರ್ಥಿಕ ಜಾಗತೀಕರಣದಿಂದ ಕುಟುಂಬ, ಸಂಸ್ಕೃತಿ ಹಾಗೂ ಸಮುದಾಯಗಳು ಸಾಕಷ್ಟು ಜರ್ಝರಿತಗೊಂಡಿವೆ. ಸಮಾಜವನ್ನು ಒಂದಾಗಿ ಹಿಡಿದಿಡುವ ಕಾರ್ಯವನ್ನು ಮಹಿಳೆಯರು ಮಾಡಿದರೂ, ಅವರ ಹಕ್ಕು, ಹಾಗೂ ಅಗತ್ಯಗಳನ್ನು ಸಮಾಜ ಕಡೆಗಣಿಸಿದೆ.

ಸಾರ್ವಜನಿಕ ಸಂಸ್ಥೆಗಳನ್ನು ನಿರ್ಲಕ್ಷ್ಯ ಮಾಡುವ ಮೂಲಕ ಅವುಗಳು ದುರ್ಬಲವಾಗಿವೆ. ಅವುಗಳ ಕೆಲಸವನ್ನು ಅಂತರಾಷ್ಟ್ರೀಯ ಸಂಸ್ಥೆಗಳು ಅಥವಾ ಲಾಭ ಪ್ರೇರಿತ ಖಾಸಗಿ ಬೃಹತ್ ಸಂಸ್ಥೆಗಳು ವಹಿಸಿಕೊಂಡಿವೆ, ಅಲ್ಲದೇ ಇವುಗಳು ಜನರ ಅಗತ್ಯತೆಗಳಿಗೆ ಸ್ಪಂದಿಸದ ಸಂಸ್ಥೆಗಳಾಗಿವೆ. ಕಾರ್ಮಿಕ ಸಂಘಟನೆಗಳು ಬಲ ಪಡೆದುಕೊಳ್ಳುತ್ತಿವೆ, ಆದರೆ ಈಗ ಇದನ್ನು ಹೆಚ್ಚು ಪಾರದರ್ಶಕಗೊಳಿಸುವ ಅಗತ್ಯ ಇದೆ.

## ಈ ಜನಾರೋಗ್ಯ ಸನ್ನದು ಜನರನ್ನು ಈ ಎಲ್ಲಾ ಕಾರ್ಯಗಳಿಗೆ ಕೂಗಿ ಕರೆಯುತ್ತದೆ :-

* ಜನರ ಸಹಭಾಗಿತ್ವ ಇರುವ ಪರಿಪೂರ್ಣ ಸಾಮಾಜಿಕ ನೀತಿಗಾಗಿ ಒತ್ತಾಯ ಹಾಗೂ ಒತ್ತಾಸೆ.

* ಎಲ್ಲರಿಗೂ ಕೆಲಸ ಮಾಡಲು, ಬದುಕಿನಾಧಾರಕ್ಕೂ, ತಮ್ಮ ಅಭಿಪ್ರಾಯಗಳನ್ನು ಹೊರಗೆಡಹಲು, ರಾಜಕೀಯ ಭಾಗಿತ್ವಕ್ಕೂ, ಧಾರ್ಮಿಕ ಆಯ್ಕೆಗೂ, ಶಿಕ್ಷಣಕ್ಕೂ ಸಮಾನ ಹಕ್ಕಿರಬೇಕು.

* ಎಲ್ಲ ವರ್ಗ, ಗುಂಪಿನ ಜನರ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಆರೋಗ್ಯ ಕಾಪಾಡುವಂತಹ ಕಾಯಿದೆ ಜಾರಿಗೆ ತರಲು ಸರಕಾರದ ಮೇಲೆ ಒತ್ತಡ ತರುವುದು.

* ರಾಜಕೀಯ ಕಾರ್ಯಸೂಚಿಯಲ್ಲಿ ಆರೋಗ್ಯ ಹಾಗೂ ಶಿಕ್ಷಣಕ್ಕೆ ಅಗ್ರಸ್ಥಾನ ದೊರೆಯಬೇಕು. ಎಲ್ಲರಿಗೂ, ಮುಖ್ಯವಾಗಿ ಮಕ್ಕಳಿಗೂ ಹಾಗೂ ಮಹಿಳೆಯರಿಗೂ ಉತ್ತಮ ಗುಣಮಟ್ಟದ ಶಿಕ್ಷಣ ಕಡ್ಡಾಯವಾಗಿ ದೊರೆಯಬೇಕು.

* ಶಿಶುಪಾಲನಾ ಸೇವೆಗಳು, ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆಗಳು ಇಂತಹ ಸೇವೆಗಳು ವ್ಯಕ್ತಿಯ ಹಾಗೂ ಸಮುದಾಯದ ಆರೋಗ್ಯ ಉತ್ತಮಗೊಳಿಸುವತ್ತ ಪ್ರಯತ್ನಿಸಬೇಕು.

* ಯಾವುದೇ ಕಾಯಿದೆಗಳಿಂದ ಜನ ತಮ್ಮ ಆಹಾರ, ನೌಕರಿ, ಹಾಗೂ ಮನೆ ಕಳೆದುಕೊಳ್ಳುವಂತಾದರೆ, ಸ್ಥಳಾಂತರ ಆಗುವುದಾದರೆ, ಅಂತಹ ನೀತಿಗಳನ್ನು ವಿರೋಧಿಸಬೇಕು.

* ಯಾರದೇ ಸ್ವಾತಂತ್ರ್ಯವನ್ನು, ಅದರಲ್ಲಿಯೂ ಮಹಿಳೆಯ ಹಾಗೂ ಮಕ್ಕಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಮೂಲಭೂತವಾದಿಗಳನ್ನು ವಿರೋಧಿಸಬೇಕು.

* ಲೈಂಗಿಕ ಪ್ರಚೋದನೆ ನೀಡುವ ಪ್ರವಾಸೋದ್ಯಮ ಹಾಗೂ ದೇಹ ಮಾರಾಟವನ್ನು ವಿರೋಧಿಸಬೇಕು

## ಪರಿಸರದ ಸವಾಲುಗಳು

ನೀರು ಹಾಗೂ ವಾಯು ಮಾಲಿನ್ಯ, ವೇಗವಾಗಿ ಬದಲಾಗುತ್ತಿರುವ ಹವಾಗುಣ, ಅಣು ಶಸ್ತ್ರಾಸ್ತ್ರ ಹಾಗೂ ತ್ಯಾಜ್ಯ ವಸ್ತುಗಳು, ವಿಷಕಾರಿ ರಾಸಾಯನಿಕಗಳು ಹಾಗೂ ಕೀಟನಾಶಕಗಳು, ಕಾಡುಗಳು ಕಡಿಮೆಯಾಗಿರುವುದು, ಎಲ್ಲವೂ ಜನರ ಆರೋಗ್ಯದ ಮೇಲೆ ಅಪಾರ ದುಷ್ಪರಿಣಾಮ ಬೀರುತ್ತವೆ. ಇದೆಲ್ಲಕ್ಕೂ ಮುಖ್ಯ ಕಾರಣ ಎಂದರೆ, ಪ್ರಾಕೃತಿಕ ಸಂಪನ್ಮೂಲಗಳ ದುರ್ಬಳಕೆ, ದೂರದೃಷ್ಟಿಯ ಕೊರತೆ, ಲಾಭ ಪ್ರೇರಕ ಪ್ರವೃತ್ತಿ ಹಾಗೂ ಶ್ರೀಮಂತರ ಮೋಜಿನ ಶೈಲಿ ಇವೆಲ್ಲವನ್ನೂ ತಕ್ಷಣವೇ ವಿರೋಧಿಸಬೇಕಿದೆ.

### ಈ ಜನಾರೋಗ್ಯ ಸನ್ನದು ಜನರನ್ನು ಈ ಎಲ್ಲಾ ಕಾರ್ಯಗಳಿಗೆ ಕೂಗಿ ಕರೆಯುತ್ತದೆ :-

* ಬೃಹತ್ ಬಹುರಾಷ್ಟ್ರೀಯ ಕಂಪನಿಗಳು, ಸಾರ್ವಜನಿಕ ಸಂಸ್ಥೆಗಳು, ಹಾಗೂ ರಕ್ಷಣಾ ವ್ಯವಸ್ಥೆಯ ಸಂಸ್ಥೆಗಳ ಮೇಲೆ ಒತ್ತಾಯ ಹೇರಿ, ಅವುಗಳು ಜನರಿಗೆ ಉತ್ತರ ನೀಡುವಂತೆ ಮಾಡಬೇಕು.

* ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಸರಕ್ಕೆ ಪೂರಕವಾಗಿವೆಯೇ ಎಂಬುದನ್ನು ಗಮನಿಸಿ. ಇಲ್ಲದಿದ್ದಲ್ಲಿ ಆರೋಗ್ಯ ಹಾಗೂ ಪರಿಸರಕ್ಕೆ ಪೂರಕವಾಗುವಂತೆ ಮಾಡಬೇಕು.

* ಅಂತರಾಷ್ಟ್ರೀಯ ಹವಾಮಾನಕ್ಕೆ ವಿಪರೀತ ಕೆಡುಕುಂಟು ಮಾಡುವ " ಗ್ರೀನ್ ಹೌಸ್" ಪರಿಣಾಮ ಬೀರುವ ಉತ್ಪಾದನೆಗಳನ್ನು ಅದರಿಂದಾಗಿ ಉಂಟಾಗುವ ಅಪಾಯಕಾರಿ ಸಮಸ್ಯೆಗಳನ್ನು ತಡೆಗಟ್ಟಬೇಕು.

* ಅಣುವಿಕಿರಣಕಾರಿ ಉತ್ಪಾದನೆಗಳನ್ನು ಮಾಡುತ್ತ , ಅದರಿಂದ ಉತ್ಪಾದನೆಯಾಗುವ ತ್ಯಾಜ್ಯ ವಸ್ತುಗಳನ್ನು ಬಡರಾಷ್ಟಗಳಲ್ಲಿ ತಂದು ಬಿಸುಡುವ ಪ್ರಥಮ ಜಗತ್ತಿನ ಧೋರಣೆಯನ್ನು ವಿರೋಧಿಸಬೇಕು.

* ಹೆಚ್ಚು ಕಬಳಿಕೆ ಹಾಗೂ ದೀರ್ಘಾವದಿಯಲ್ಲದ ಜೀವನ ಶೈಲಿಯನ್ನು ಕಡಿಮೆಗೊಳಿಸಬೇಕು. ಶ್ರೀಮಂತ ರಾಷ್ಟಗಳ ಕಬಳಿಕೆ ಹಾಗೂ ಮಾಲಿನ್ಯಗಳನ್ನು ಶೇಖಡ 90% ರಷ್ಟು ಕಡಿಮೆಗೊಳಿಸಬೇಕು.

* ಔದ್ಯೋಗಿಕ ಸುರಕ್ಷಿತೆ ಹಾಗೂ ಆರೋಗ್ಯಕ್ಕಾಗಿ ಸೂಕ್ತ ಸೌಲಭ್ಯಗಳನ್ನು ಒದಗಿಸಲು ಒತ್ತಾಯ ಹಾಗೂ ಕಾರ್ಮಿಕ ಕೇಂದ್ರೀಕೃತ ನಿರ್ಧಾರಗಳನ್ನು ಕಾರ್ಖಾನೆಗಳಲ್ಲಿ ಜಾರಿಗೊಳಿಸಬೇಕು.

* ಸಮುದಾಯ, ಕಾರ್‍ಯಸ್ಥಳ ಅಥವ ಮನೆಗಳಲ್ಲಿ ಅಪಘಾತ ತಡೆಗಟ್ಟಲು ಸೂಕ್ತ ಸೌಲಭ್ಯಗಳು.

* ಬದುಕಿನ ಮೇಲೆ ಹಕ್ಕುಸ್ಥಾಪನೆ ತಿರಸ್ಕರಿಸಿ, ರೂಢೀಗತ ಹಾಗೂ ಸ್ಥಳೀಯ ಜ್ಞಾನವನ್ನು ಮತ್ತೊಬ್ಬರು ಕಸಿದುಕೊಳ್ಳುವುದನ್ನು ಹಿಮ್ಮೆಟ್ಟಿಸುವುದು.

* ಜನ ಕೇಂದ್ರೀಕೃತ ಸಮುದಾಯ ಆಧಾರಿತ ಪರಿಸರ ಹಾಗೂ ಸಮಾಜ ಪ್ರಗತಿಯ ಸೂಚ್ಯಂಕಗಳನ್ನುತಯಾರಿಸುವುದು, ಪರಿಸರ ನಾಶ ಹಾಗೂ ಜನಾರೋಗ್ಯವನ್ನು ನಿಯಮಿತವಾಗಿ ಮಾಪನ ಮಾಡುವುದು ಹಾಗೂ ಅದನ್ನು ಸರಿಪಡಿಸುವುದು.

# ಯುದ್ಧ, ಹಿಂಸೆ, ಘರ್ಷಣೆ ಹಾಗೂ ಪ್ರಾಕೃತಿಕ ವಿಕೋಪಗಳು

ಇವುಗಳು ಸಮುದಾಯವನ್ನು ಛಿದ್ರಗೊಳಿಸಿ, ಮಾನವನ ಬದುಕಿನ ಘನತೆ, ಗೌರವಗಳನ್ನು ಹಾಳುಗೆಡಹುತ್ತವೆ. ಇವುಗಳಿಂದ ಸಮುದಾಯದವರ ಮುಖ್ಯವಾಗಿ ಮಹಿಳೆ ಹಾಗೂ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಅಪಾರ ದುಷ್ಪರಿಣಾಮ ಉಂಟಾಗುತ್ತದೆ. ಶಸ್ತ್ರಾಸ್ತ್ರ ಶೇಖರಣೆ ಹಾಗೂ ಕಾನೂನುಬದ್ಧವಲ್ಲದ ಭ್ರಷ್ಟ ಅಂತರಾಷ್ಟ್ರೀಯ ಶಸ್ತ್ರ ವ್ಯಾಪಾರಗಳಿಂದ / ಸಾಮಾಜಿಕವಾಗಿ ಜನಜೀವನ ಅಸ್ತವ್ಯಸ್ತವಾಗಿದೆ, ಅಲ್ಲದೇ ಸರ್ಕಾರಗಳು ಅಭಿವೃದ್ಧಿಗೆ, ಶಸ್ತ್ರಾಸ್ತ್ರಗಳಿಗೆ ಹೆಚ್ಚು ಮನ್ನಣೆ ನೀಡುತ್ತಿದೆ.

**ಜಗತ್ತಿನ ಜನರನ್ನು ಈ ಸನ್ನದು ಈ ಕಾರ್ಯಗಳಿಗೆ ಕೂಗಿ ಕರೆಯುತ್ತದೆ :-**

* ಶಾಂತಿ ಮತ್ತು ನಿಶಸ್ತ್ರೀಕರಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
* ಶಸ್ತ್ರಾಸ್ತ್ರಕ್ಕಾಗಿ ಮಾಡುವ ಸಂಶೋಧನೆ, ಎಲ್ಲಿ ರೀತಿಯ ಶಸ್ತ್ರಾಸ್ತ್ರಗಳ ಪರೀಕ್ಷೆ ಹಾಗೂ ಉಪಯೋಗ ಮುಂತಾದವನ್ನು ವಿರೋಧಿಸುವುದು.
* ಎಲ್ಲೆಡೆ, ಅದರಲ್ಲಿಯೂ ಮುಖ್ಯವಾಗಿ ಅಂತರ್ಯುದ್ಧ ಹಾಗೂ ನರಮೇಧ ನಡೆಯುತ್ತಿರುವ ದೇಶಗಳಲ್ಲಿ ಶಾಂತಿಸ್ಥಾಪನೆಗಾಗಿ ಪ್ರಯತ್ನ
* ಬಾಲಯೋಧರ ಉಪಯೋಗ, ಯುದ್ಧ ಸಂದರ್ಭಗಳಲ್ಲಿ ಮಹಿಳೆ ಹಾಗೂ ಮಕ್ಕಳ ಮೇಲೆ ಅತ್ಯಾಚಾರ ಮುಂತಾದವನ್ನು ತಡೆಗಟ್ಟುವುದು.
* ಮಾನವ ಗೌರವಕ್ಕೆ ಚ್ಯುತಿ ತರುವ ಎಲ್ಲ ಕೆಲಸಗಳನ್ನು ತಿರಸ್ಕರಿಸುವುದು.

* ಮಾನವೀಯ ಪುನರ್ವಸತಿ ಕೆಲಸಗಳ ಮಿಲಿಟರೀಕರಣ ವಿರೋಧಿಸುವುದು.

* ವಿಶ್ವ ಸಂಸ್ಥೆಯ ಸುಭದ್ರತಾ ಪರಿಷತ್ತು ಹೆಚ್ಚು ಪ್ರಜಾಸತಾತ್ತ್ಮಕವಾಗಿ ಕೆಲಸ ಮಾಡುವಂತೆ ಮಾಡುವುದು.

* ವಿಶ್ವ ಸಂಸ್ಥೆ ಹಾಗೂ ಇತರ ಬಲಿಷ್ಠ ರಾಷ್ಟ್ರಗಳು ನಿರ್ಬಂಧ ಹೇರುವುದರಿಂದ, ಸಾಮಾನ್ಯ ಪ್ರಜೆಗಳಿಗೆ ಆಗುವ ತೊಂದರೆಯ ಸಲುವಾಗಿ ನಿರ್ಬಂಧಗಳನ್ನು ವಿರೋಧಿಸುವುದು.

* ಜನರು ತಮ್ಮ ಪರಿಸರ, ಸಮುದಾಯಗಳು ನಿಶಸ್ತ್ರೀಕೃತ ಪ್ರದೇಶ ಎಂಬುದನ್ನು ತಾವೇ ನಿರ್ಧರಿಸುಲು ಸ್ವಾತಂತ್ರ್ಯ ಒದಗಿಸುವುದು.

* ಹಿಂಸಾತ್ಮಕ, ಹೋರಾಟದ ಮನೋಭಾವ ಎಲ್ಲಿ ಕಂಡುಬಂದರೂ ಅದನ್ನು ವಿರೋಧಿಸುವುದು, ಅಲ್ಲದೆ ಶಾಂತಿಯುತ ಸಹಬಾಳ್ವೆಗಾಗಿ ಶ್ರಮಿಸುವುದು.

* ಪ್ರಾಕೃತಿಕ ವಿಕೋಪಗಳ ನಿವಾರಣೆ ಹಾಗೂ ಈ ವಿಕೋಪಗಳಿಂದ ಉಂಟಾಗುವ ಮಾನವನಷ್ಟಗಳ ಸಮಸ್ಯೆಗಳನ್ನು ಕಡಿಮೆ ಮಾಡಲು ಇರುವ ಪ್ರಯತ್ನಗಳಿಗೆ ಒತ್ತಾಸೆ ನೀಡುವುದು.

## ಜನ ಕೇಂದ್ರೀಕೃತ ಆರೋಗ್ಯ ವಿಭಾಗ

ಈ ಸನ್ನದು, ಯಾರೊಬ್ಬರಲ್ಲಿಯೂ, ಯಾವುದೇ ರೀತಿಯ ಭೇದ ತೋರದೆ, ಜಾಗತಿಕ ಹಾಗೂ ಪರಿಪೂರ್ಣ ಪ್ರಾಥಮಿಕ ಆರೋಗ್ಯ ಪಾಲನೆ ಒದಗಿಸಬೇಕೆಂದು ಪ್ರತಿಪಾದಿಸುತ್ತದೆ. ಈ ಗುರಿ ಸಾಧಿಸಲು ಆರೋಗ್ಯ ಸೇವೆಗಳಲ್ಲಿ ಸಾಕಷ್ಟು ಸಂಪನ್ಮೂಲ ಇರಬೇಕಿದ್ದು, ಪ್ರಜಾವಾದಿಯಾಗಿರಬೇಕಾಗುತ್ತದೆ.

### ಈ ಜನಾರೋಗ್ಯ ಸನ್ನದು ಜನರನ್ನು ಈ ಎಲ್ಲಾ ಕಾರ್ಯಗಳಿಗೆ ಕೂಗಿ ಕರೆಯುತ್ತದೆ :-

* ಆರೋಗ್ಯವನ್ನು ಖಾಸಗೀಕರಣಗೊಳಿಸಿ ವಸ್ತುವನ್ನಾಗಿ ಮಾರ್ಪಡಿಸುವ ಎಲ್ಲ ರಾಷ್ಟ್ರೀಯ-ಅಂತರಾಷ್ಟ್ರೀಯ ನೀತಿಗಳನ್ನು ವಿರೋಧಿಸುವುದು.

* ಪ್ರಾಥಮಿಕ ಆರೋಗ್ಯ ಪಾಲನೆಗೆ ಆದ್ಯತೆ ನೀಡುವ, ಹಣ ಸಹಾಯ ನೀಡುವ, ಸರ್ಕಾರಗಳನ್ನು ಉತ್ತೇಜಿಸಿ, ಆ ಮೂಲಕ ಮಾತ್ರವೇ ನಿಜವಾದ ಆರೋಗ್ಯ ಸಾಧನೆ ಸಾಧ್ಯ ಎಂದು ನಿರೂಪಿಸುವುದು.

* ರಾಷ್ಟ್ರೀಯ ಆರೋಗ್ಯ ಹಾಗೂ ಔಷಧ ನೀತಿಗಳನ್ನು ಜಾರಿಗೆ ತರುವಂತೆ ಸರ್ಕಾರಗಳ ಮೇಲೆ ಒತ್ತಡ ತರುವುದು.

* ಸರ್ಕಾರಗಳು ಖಾಸಗೀಕರಣವನ್ನು ಉತ್ತೇಜಿಸುವುದನ್ನು ವಿರೋಧಿಸಿ, ಎಲ್ಲ ರೀತಿಯ (ಸರ್ಕಾರಿ, ಖಾಸಗಿ, ಸ್ವಯಂ ಸೇವಾ ಸಂಸ್ಥೆ) ವೈದ್ಯಕೀಯ ಸೇವೆಗಳನ್ನು ನಿಯಂತ್ರಿಸುವುದು.

* ವಿಶ್ವ ಆರೋಗ್ಯ ಸಂಸ್ಥೆಯು ಲಂಬ ಕಾರ್ಯಕ್ರಮಗಳನ್ನು ವಿರೋಧಿಸುವಂತೆ, ಬಡಜನರ ಆರೋಗ್ಯಕ್ಕೆ ಜನಪರ ಸಂಘಟನೆಗಳನ್ನು ತನ್ನ ಕೆಲಸದಲ್ಲಿ ಸೇರಿಸಿಕೊಳ್ಳುವಂತೆ ಒತ್ತಾಯಿಸುವುದು ಮತ್ತು ಬೃಹತ್ ಸಂಸ್ಥೆಗಳ ಆಶೋತ್ತರಗಳನ್ನು ಉತ್ತೇಜಿಸದಿರುವುದು.

* ಸಮುದಾಯದ ನಿರ್ಧಾರಗಳನ್ನು ಎಲ್ಲ ಹಂತಗಳಲ್ಲೂ ಒಳಗೊಳ್ಳಬೇಕು, ಮುಖ್ಯವಾಗಿ ರೋಗಿಗಳ ಹಾಗೂ ಗ್ರಾಹಕರ ಹಕ್ಕುಗಳಿಗೆ ಮಾನ್ಯತೆ ನೀಡಬೇಕು.

* ಪ್ರಾಥಮಿಕ ಆರೋಗ್ಯ ಪಾಲನೆಯಲ್ಲಿ ರೂಢಿಗತ ಔಷಧಗಳ ಉಪಯೋಗವನ್ನು ಸಮಗ್ರಗೊಳಿಸುವಂತೆ ಒತ್ತಾಯಿಸುವುದು.

* ಆರೋಗ್ಯ ಸಿಬ್ಬಂದಿಗಳ ತರಬೇತಿ, ಸಮಸ್ಯೆ ಹಾಗೂ ಪರಿಸ್ಥಿತಿಯನ್ನು ಅವಲಂಬಿಸಿರಬೇಕು. ಅಲ್ಲದೇ ಜಾಗತಿಕ ಅಂಶಗಳಿಂದ, ಸ್ಥಳೀಯ ಸಮುದಾಯಗಳ ಮೇಲೆ ಆಗುವ ಪರಿಣಾಮದ ಬಗ್ಗೆ ಸಂಪೂರ್ಣ ವಿಚಾರ ತಿಳಿದಿರಬೇಕು.

* ಆರೋಗ್ಯ ಹಾಗೂ ವೈದ್ಯಕೀಯ ತಂತ್ರಜ್ಞಾನ ವನ್ನು ಸರಳೀಕರಣಗೊಳಿಸಬೇಕು ಮತ್ತು ಇವುಗಳು ಜನರ ಅಗತ್ಯಗಳಿಗೆ ಸ್ಪಂದಿಸುವಂತಿರಬೇಕು.

* ಆರೋಗ್ಯದ ಸಂಶೋಧನೆಯು ಜನರ ಸಹಯೋಗದೊಂದಿಗೆ ಆಗಬೇಕು, ಅಲ್ಲದೆ ಜನರ ಪರಿಸ್ಥಿತಿಗೆ ಅನುಗುಣ ವಾಗಿರಬೇಕು ಹಾಗೂ ಜಾಗತಿಕ ನೀತಿ ಮೌಲ್ಯಗಳನ್ನು ಪಾಲಿಸಬೇಕು.

* ಸಂತಾನೋತ್ಪತ್ತಿ ಹಾಗೂ ಸಂಬಂಧಿತ ವಿಷಯಗಳಲ್ಲಿ ಜನರ ಹಕ್ಕುಗಳಿಗೆ ಆದ್ಯತೆಯಿರಬೇಕು. ಅಲ್ಲದೆ ಕಡ್ಡಾಯ ಜನಸಂಖ್ಯಾ ನಿಯಂತ್ರಣ ನೀತಿಯನ್ನು ವಿರೋಧಿಸಬೇಕು.

# ಜನಾರೋಗ್ಯ ಸಭೆ ಮತ್ತು ಸನ್ನದು

ಜನಾರೋಗ್ಯ ಸಭೆಯ ಪರಿಕಲ್ಪನೆ ಕಳೆದ ಒಂದು ದಶಕದಿಂದ ಚರ್ಚಿಸಲ್ಪಡುತ್ತಿದೆ. 1998ರಲ್ಲಿ ಆರಂಭವಾದ ಈ ಪ್ರಕ್ರಿಯೆ 2000 ದ ಇಸವಿಯಲ್ಲಿ ಬಾಂಗ್ಲಾದೇಶದಲ್ಲಿ ನಡೆದ ಸಮಾವೇಶದ ಮೂಲಕ ಒಂದು ಹಂತ ಮುಗಿಸಿತು.

ಆನಂತರ ಹಲವು ದೇಶಗಳಲ್ಲಿ ಈ ಬಗ್ಗೆ ಚರ್ಚೆ, ವಾಗ್ವಾದಗಳ ಮೂಲಕ ಹೊರಬಂದಿರುವ ಸನ್ನದು ಇದು. ಇದನ್ನು ಢಾಕಾದ ಸಮಾವೇಶ ಎಲ್ಲರ ಒಪ್ಪಿಗೆಗಾಗಿ ವರದಿ ಮಾಡಲಾಯಿತು.

ಈ ಸನ್ನದು ಎಲ್ಲರ ಸಮಾನ ಆಕಾಂಕ್ಷೆ, ಆರೋಗ್ಯ ಜಗತ್ತಿನ ಬಗ್ಗೆ ಕಾಳಜಿ, ಹಾಗೂ ತ್ವರಿತವಾಗಿ ನಡೆಯುವ ಕ್ರಿಯೆಗಳನ್ನು ಪ್ರತಿಬಿಂಬಿಸುತ್ತವೆ. ಈ ಸನ್ನದನ್ನು ಒಂದು ಉಪಕರಣದಂತೆ ಬಳಸಿಕೊಂಡು ಜಾಗತಿಕ ಆರೋಗ್ಯ ಚಳುವಳಿ ಆರಂಭಿಸಬಹುದು.

# ಬನ್ನಿ ಈ ಜನಾರೋಗ್ಯ ಸನ್ನದನ್ನ ಧೃಢೀಕರಿಸೋಣ.

## ಜನಾರೋಗ್ಯ ಸನ್ನದು

1) ನಾನು ಸನ್ನದಿನ ವಿಷಯಗಳನ್ನು ಒಪ್ಪುತ್ತೇನೆ.

2) ನಾನು ಈ ಚಳುವಳಿಗೆ ಪ್ರೋತ್ಸಾಹ ನೀಡುತ್ತೇನೆ.

3) ನಾನು ಈ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಇಚ್ಛಿಸುತ್ತೇನೆ.

ಹೆಸರು :-

ಸಂಸ್ಥೆ:

ವಿಳಾಸ :-

ದೂರವಾಣಿ /ಫ್ಯಾಕ್ಸ್ ಸಂಖ್ಯೆ / ಇಮೇಲ್ :-

ದಿನಾಂಕ :-

ಸಹಿ :-

**ದಯವಿಟ್ಟು ಈ ವಿಳಾಸಕ್ಕೆ ಕಳುಹಿಸಿ**

ಜನಾರೋಗ್ಯ ಆಂದೋಲನ - ಕರ್ನಾಟಕ
C/O ಸಮುದಾಯ ಆರೋಗ್ಯ ಕೋಶ
ನಂ.367, ಶ್ರೀನಿವಾಸ ನಿಲಯ
ಜಕ್ಕಸಂದ್ರ, ಒಂದನೇ ಮುಖ್ಯರಸ್ತೆ ಕೋರಮಂಗಲ ಒಂದನೇ ಬಡಾವಣೆ
ಬೆಂಗಳೂರು – 560 034
ದೂರವಾಣಿ : (080) 5531518, 5525372.
ಫ್ಯಾಕ್ಸ್ : (080) 5525372 ಇಮೇಲ್ : sochara@vsnl.com

# ಜನಾರೋಗ್ಯ ಆಂದೋಲನ - ಕರ್ನಾಟಕ

## ಎಲ್ಲರಿಗೂ ಆರೋಗ್ಯ - ಈಗ ಇದಕ್ಕಾಗಿ ಜನಾಂದೋಲನ

| | | |
|---|---|---|
| ಅಧ್ಯಕ್ಷರು | - | ಡಾ॥ ಹೆಚ್. ಸುದರ್ಶನ್ |
| ಉಪಾಧ್ಯಕ್ಷರು | - | ಡಾ॥ ರೇವತಿ ನಾರಾಯಣನ್ |
| ಸಂಯೋಜಕರು (ಕಾರ್ಯಕ್ರಮ) | - | ಈ. ಬಸವರಾಜು |
| ಸಂಯೋಜಕರು (ಸಂವಹನ) | - | ಎ. ಪ್ರಹ್ಲಾದ್ |
| ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರು | - | ಡಾ॥ ರವಿ ನಾರಾಯಣ್ |

### ಸಂಘಟನಾ ಸಮಿತಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA)
ಭಾರತ ಜ್ಞಾನ ವಿಜ್ಞಾನ ಸಮಿತಿ (BGVS)
ಸಮುದಾಯ ಆರೋಗ್ಯ ಕೋಶ (CHC)
ಕ್ಯಾಥೋಲಿಕ್ ಹೆಲ್ತ್ ಅಸೋಸಿಯೇಷನ್ ಆಫ್ ಕರ್ನಾಟಕ (CHAIKA)
ಕ್ಯಾಂಪೇನ್ ಎಗನೆಸ್ಟ್ ಚೈಲ್ಡ್ ಲೇಬರ್ (CACL)
ಕ್ರಿಶ್ಚಿಯನ್ ಮೆಡಿಕಲ್ ಅಸೋಸಿಯೇಷನ್ ಆಫ್ ಇಂಡಿಯಾ - ಕರ್ನಾಟಕ (CMAI)
ಔಷಧಿ ಕ್ರಿಯಾ ವೇದಿಕೆ - ಕರ್ನಾಟಕ (DAF-K)
ಭಾರತೀಯ ಕುಟುಂಬ ಯೋಜನಾ ಸಂಘ (FPAI)
ಕರ್ನಾಟಕ ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ (FEVORD-K)
ಸ್ಥಳೀಯ ಆರೋಗ್ಯ ಪರಂಪರೆಗಳ ಪುನರುತ್ಥಾನ ಪ್ರತಿಷ್ಠಾನ (FRLHT)
ಜಾಯಿಂಟ್ ವುಮೆನ್ಸ್ ಪ್ರೋಗ್ರಾಂ - ಕರ್ನಾಟಕ (JWP)
ಕರ್ನಾಟಕ ರಾಜ್ಯ ಔಷಧಿ ಮತ್ತು ಮಾರಾಟ ಪ್ರತಿನಿಧಿಗಳ ಸಂಘ (KSMSRA)
ಕರ್ನಾಟಕ ಆರೋಗ್ಯ ಸ್ವಯಂ ಸೇವಾ ಸಂಸ್ಥೆ (VHAK)
ಮಹಿಳಾ ಸಮಖ್ಯ - ಕರ್ನಾಟಕ (MSK)
ನ್ಯೂ ಎಂಟಿಟಿ ಫಾರ್ ಸೋಶಿಯಲ್ ಆಕ್ಷನ್ (NESA)
ವಿವೇಕಾನಂದ ಪ್ರತಿಷ್ಠಾನ (VF)

### ಭಾಗವಹಿಸುವ ಇತರ ಸಂಸ್ಥೆಗಳು

ಆರೋಗ್ಯ ಪಾಲನೆ ಮತ್ತು ಆರೋಗ್ಯ ನೀತಿಯ ಬಗ್ಗೆ ಕಳಕಳಿಯುಳ್ಳ ಮೇಲಿನ ಸಂಘಟನೆಗಳ ಜಾಲದಲ್ಲಿರುವ ಮತ್ತು ಹೊರಗಿರುವ ಅನೇಕ ಸಂಸ್ಥೆಗಳು ಜನಾರೋಗ್ಯ ಆಂದೋಲನ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ.

### ಸಂಪರ್ಕ ವಿಳಾಸ :

ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು - 560 012
ದೂರವಾಣಿ : 3600384, ಇಮೇಲ್ : bgvs_kar@hotmail.com
ಸಮುದಾಯ ಆರೋಗ್ಯ ಕೋಶ, ನಂ. 367, ಶ್ರೀನಿವಾಸ ನಿಲಯ, ಜಕ್ಕಸಂದ್ರ ಒಂದನೇ ಮುಖ್ಯ ರಸ್ತೆ
ಕೋರಮಂಗಲ ಒಂದನೇ ಬಡಾವಣೆ, ಬೆಂಗಳೂರು - 560 034.
ದೂರವಾಣಿ : 5531518, 5525372, ಫ್ಯಾಕ್ಸ್ : 5525372, ಇಮೇಲ್ : sochara@vsnl.com

# ಜನಾರೋಗ್ಯ ಆಂದೋಲನ - ಕರ್ನಾಟಕ

'ಕ್ರಿ. ಶ. 2000ದ ವೇಳೆಗೆ ಎಲ್ಲರಿಗೂ ಆರೋಗ್ಯ' ಎಂಬ ಗುರಿಯನ್ನು ಸರ್ಕಾರ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳು ಮರೆತಿವೆ. ಆದರೆ ನಾವು ಅದನ್ನು ಮರೆಯಲಾರೆವು. ಜನಕೇಂದ್ರಿತ ಪ್ರಯತ್ನಗಳನ್ನು ಬಲಪಡಿಸಿ ವರ್ಧಿಸುವುದಕ್ಕೆ ಈಗ ಸಕಾಲ. ಇದರಿಂದ ನವೀನ ಪರಿಹಾರಗಳು ಮೂಡಿ ನೀತಿ-ನಿರ್ಣಾಯಕರನ್ನು ಈ ಬಗ್ಗೆ ಒತ್ತಾಯಿಸಲು ಸಾಧ್ಯವಾದೀತು.

ಎಲ್ಲರಿಗೂ ಆರೋಗ್ಯವನ್ನು ಸಾಧಿಸುವುದೆಂದರೆ ಜನರಿಗೆ ಗುಣಮಟ್ಟದ ವೈದ್ಯಕೀಯ ಸೌಕರ್ಯ, ಶುದ್ಧವಾದ ಕುಡಿಯುವ ನೀರು, ನೈರ್ಮಲ್ಯ, ಪೋಷಕಾಂಶಭರಿತ ಆಹಾರ, ಉಡುಪು, ವಸತಿ ಮತ್ತು ಉದ್ಯೋಗಗಳನ್ನು ಒದಗಿಸುವುದು, ಜಾತಿ, ವರ್ಗ, ಜನಾಂಗ ಹಾಗೂ ಲಿಂಗಾಧಾರಿತ ಭೇದ ಭಾವ ಇರದಂತೆ ನೋಡಿಕೊಳ್ಳುವುದು ಇದರ ಅಂಗವೇ. ಜನರ ಆರೋಗ್ಯ ಹದಗೆಡುತ್ತಿರುವುದಕ್ಕೂ ಜಾಗತೀಕರಣಕ್ಕೂ ಸಂಬಂಧವಿದೆ ಎಂಬುದು ಜನರಿಗೆ ತಿಳಿಯಬೇಕು. ರಾಚನಿಕ ಹೊಂದಾಣಿಕೆ ನೀತಿಗಳು ಅಲ್ಮಾ ಆಟಾದ ದೂರದೃಷ್ಟಿಯನ್ನು ಕಡೆಗಣಿಸುತ್ತಿರುವಾಗ ಎಲ್ಲರಿಗೂ ಆರೋಗ್ಯದ ಆಶಯದ ನವೀಕರಣ ಅನಿವಾರ್ಯ. ಈ ಸಲುವಾಗಿ ಜನಾರೋಗ್ಯ ಆಂದೋಲನವೆಂಬ ಹೆಸರಿನಡಿ ಪ್ರಚಾರಾಂದೋಲನವನ್ನು ಅನೇಕ ಜನಪರ ಸಂಘಟನೆಗಳು ದೇಶದಾದ್ಯಂತ ಕೈಗೊಂಡಿವೆ. ಈ ಕಾರ್ಯಕ್ರಮದ ಮೂರು ಪ್ರಮುಖ ಉದ್ದೇಶಗಳೆಂದರೆ :

⇨ ಆರೋಗ್ಯ ಹಾಗೂ ಸಮವಿತರಣೆಯ ಅಭಿವೃದ್ಧಿಯನ್ನು ಪ್ರಥಮಾದ್ಯತೆಯಲ್ಲಿ ಪರಿಗಣಿಸುವಂತೆ ಪ್ರಾಥಮಿಕ ಆರೋಗ್ಯ ಪಾಲನೆಯ ನೀತಿಯನ್ನು ಮರುಸ್ಥಾಪಿಸುವುದು.

⇨ ಸ್ಥಳೀಯ, ರಾಷ್ಟ್ರೀಯ ಹಾಗೂ ಜಾಗತಿಕ ಮಟ್ಟದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳನ್ನು ಸಂಘಟಿಸಿ ದೀರ್ಘಾವಧಿ ನಿರಂತರ ಪರಿಹಾರಗಳನ್ನು ಆರೋಗ್ಯ ಸಮಸ್ಯೆ ಕುರಿತಂತೆ ರೂಪಿಸುವುದು.

⇨ ಅಂತರ ವಲಯದ ಸಮಸ್ಯೆಯಾಗಿ ಆರೋಗ್ಯ ತತ್ವವನ್ನು ಧೃಢಪಡಿಸುವುದು.

ಈ ಕಾರ್ಯಕ್ರಮದ ಮುಖ್ಯ ಚಟುವಟಿಕೆಗಳೆಂದರೆ - ಎಲ್ಲರಿಗೂ ಆರೋಗ್ಯ - ಈಗ! ಕುರಿತು ಜನರನ್ನು ಸಂಘಟಿಸಿ ಸ್ಥಳೀಯ ಮಟ್ಟದಲ್ಲಿನ ಆರೋಗ್ಯ ನಿರ್ವಹಣೆ ತಿಳಿದುಕೊಳ್ಳುವುದು. ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಿ, ತನ್ಮೂಲಕ ಜಿಲ್ಲೆಗಳಲ್ಲಿ, ವಿಚಾರ ಸಂಕಿರಣ, ಜಾಗೃತಿ ಕಾರ್ಯಕ್ರಮಗಳು, ಸ್ಥಳೀಯ ಸೇವಾ ಸೌಲಭ್ಯಗಳ ಬಗ್ಗೆ ಅಧ್ಯಯನವನ್ನು ಮುಂತಾದವುಗಳನ್ನು ಏರ್ಪಡಿಸುವುದಾಗಿದೆ.

ಜನಾರೋಗ್ಯ ಆಂದೋಲನ ಕಾರ್ಯಕ್ರಮವನ್ನು ರಾಜ್ಯದ 15 ಪ್ರಮುಖ ಸಂಸ್ಥೆಗಳು ಒಟ್ಟಾಗಿ ಆಯೋಜಿಸುತ್ತಿವೆ. ಜನಾರೋಗ್ಯ ಸನ್ನದು, ಈ ಸಂಘಗಳ ಒಟ್ಟು ಸಂಘಟನೆಯ ಫಲವಾಗಿದೆ.